# Mr. Nikolai Patrushev, Secretary of the Security Council of the Russian Federation calls on Prime Minister Shri Narendra Modi

September 08, 2021

## ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ರಷ್ಯಾ ಒಕ್ಕೂಟದ ಭದ್ರತಾ ಮಂಡಳಿಯ ಕಾರ್ಯದರ್ಶಿ ಶ್ರೀ ನಿಕೊಲಾಯ್ ಪಟ್ರುಶೆವ್

**ಸೆಪ್ಟೆಂಬರ್** 08, 2021

ರಷ್ಯಾ ಒಕ್ಕೂಟದ ಭದ್ರತಾ ಮಂಡಳಿಯ ಕಾರ್ಯದರ್ಶಿ ಶ್ರೀ ನಿಕೊಲಾಯ್ ಪಟ್ರುಶೆವ್ ಅವರು ಇಂದು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದರು.

ರಾಷ್ಟ್ರೀಯ ಭದ್ರತಾ ಸಲಹೆಗಾರ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜೊತೆಗಿನ ಫಲಪ್ರದ ಮಾತುಕತೆ ಬಗ್ಗೆ ಪಟ್ರುಶೆವ್ ಅವರು ಪ್ರಧಾನಿಯವರಿಗೆ ವಿವರಿಸಿದರು. ಇದೇ ವೇಳೆ, ಭಾರತದೊಂದಿಗಿನ 'ವಿಶೇಷ ಮತ್ತು ವ್ಯೂಹಾತ್ಮಕ ಪಾಲುದಾರಿಕೆ'ಯನ್ನು ಮತ್ತಷ್ಟು ಆಳಗೊಳಿಸಲು ರಷ್ಯಾದ ಬಲವಾದ ಬದ್ಧತೆಯನ್ನು ವ್ಯಕ್ತಪಡಿಸಿದರು.

ದೇಶದ ನೆರೆ ಭಾಗದಲ್ಲಿ ಪ್ರಮುಖ ಬದಲಾವಣೆಗಳು ನಡೆಯುತ್ತಿರುವ ಸಂದರ್ಭದಲ್ಲಿ ಕಾರ್ಯದರ್ಶಿ ಪಟ್ರುಶೆವ್ ನೇತೃತ್ವದ ರಷ್ಯಾ ನಿಯೋಗದ ಭಾರತಕ್ಕೆ ಭೇಟಿ ನೀಡಿದ್ದಕ್ಕಾಗಿ ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತ-
ರಷ್ಯಾ ಪಾಲುದಾರಿಕೆಯ ಬಗ್ಗೆ ನಿರಂತರ ಗಮನ ಹರಿಸಿದ್ದಕ್ಕಾಗಿ ಅಧ್ಯಕ್ಷ ಪುಟಿನ್ ಅವರಿಗೆ ಧನ್ಯವಾದಗಳನ್ನು ತಿಳಿಸುವಂತೆ ಅವರು ಕಾರ್ಯದರ್ಶಿ ಪಟ್ರುಶೆವ್ ಅವರನ್ನು ಕೋರಿದರು. ದ್ವಿಪಕ್ಷೀಯ ಶೃಂಗಸಭೆಗಾಗಿ ಮುಂದಿನ ದಿನಗಳಲ್ಲಿ ಅಧ್ಯಕ್ಷ ಪುಟಿನ್ ಅವರನ್ನು ಭಾರತದಲ್ಲಿ ಸ್ವಾಗತಿಸಲು ತಾವು ಎದುರು ನೋಡುತ್ತಿದ್ದೇನೆ ಎಂದು ಪ್ರಧಾನಿ ಹೇಳಿದರು.

**ನವ ದೆಹಲಿ**
**ಸೆಪ್ಟೆಂಬರ್** 08, 2021

DISCLAIMER: This is an approximate translation. The original is available in English on MEA's website and may be referred to as the official press release.